# ಅಪ್ಪನಾದಾಗ ಬದಲಾದ ಬದುಕು!



ಅಪ್ಪನಾಗುವುದೆಂದರೆ ಅವರ್ಣನೀಯ ಅನುಭವ ಎನ್ನುವುದು ಅಮೀರ್ ಖಾನ್ ಹೃದಯದ ಮಾತು. ಹುಡುಗಾಟಿಕೆಯಿಂದ ಸಂಸಾರಸ್ಥನಾಗಿ ಹೊಣೆಗಾರಿಕೆ ಬದಲಾದ ಗಳಿಗೆಗಿಂತಲೂ ಅಪ್ಪನಾದ ಸಮಯ ಬದುಕು ಬದಲಾಯಿಸುತ್ತದೆ ಎನ್ನುವುದು ಆತನ ಅಭಿಪ್ರಾಯ.

ತಂದೆಯಾಗುತ್ತಿದ್ದಂತೆಯೇ ತಾನು ಬದಲಾದ ಮನುಷ್ಯನಾದೆ. ಅದು ತನ್ನ ಹೃದಯಕ್ಕೆ ಹತ್ತಿರವಾದ ಅನುಭೂತಿ ಎಂದಿದ್ದಾನೆ ಅಮೀರ್.

ಮಕ್ಕಳು ಪೋಷಕರ ಬದುಕಿನಲ್ಲಿ ವಿಶೇಷ ಸಂತೋಷ ತರುತ್ತಾರೆ. ತನ್ನ ಮೊದಲ ಮಗು ಜುನೈದ್ ಜನಿಸಿದಾಗ ತನಗೆ ಅಂತಹ ವಿಶೇಷ ಖುಷಿಯ ಅನುಭವ ಉಂಟಾಗಿತ್ತು ಎಂದು ಹೇಳಿಕೊಂಡಿದ್ದಾನೆ.

‘‘ನಿಮ್ಮ ಬದುಕಿನಲ್ಲಿ ಮಕ್ಕಳನ್ನು ಹೊಂದುವುದು ಒಂದು ಅವರ್ಣನೀಯ ಸಂಭ್ರಮ. ಇದು ನಿಜಕ್ಕೂ ನಿಮ್ಮ ಬದುಕನ್ನು ಬದಲಿಸುವ ಗಳಿಗೆ. ನಾನು ಚಿಕ್ಕವನಾಗಿದ್ದಾಗ ನನ್ನಮ್ಮ ಯಾವಾಗಲೂ ಹೇಳುತ್ತಿದ್ದಳು, ‘ನೀನು ಅಪ್ಪನಾದ ಬಳಿಕವೇ ಪೋಷಕನಾಗುವುದೆಂದರೆ ಏನು ಎಂಬುದರ ಅರ್ಥ ತಿಳಿಯುತ್ತದೆ’ ಎಂದು. ಅದೀಗ ಅರಿವಾಗುತ್ತಿದೆ’’ ಎಂದಿದ್ದಾನೆ ಅಮೀರ್.

‘ಮೊದಲ ಮಗು ಜುನೈದ್ ಹುಟ್ಟಿದಾಗ ನನ್ನ ಬದುಕು ಬದಲಾಯಿತು, ನಾನೂ ಬದಲಾದೆ. ಆದರೆ ಅನೇಕ ಜನರಿಗೆ, ಆ ಅವಕಾಶವೇ ದೊರಕುವುದಿಲ್ಲ ಎಂದು ವಿಷಾದ ವ್ಯಕ್ತಪಡಿಸಿದ್ದಾನೆ. ಜುನೈದ್ ಮತ್ತು ಇರಾ ಅಮೀರ್‌ನ ಮೊದಲ ಪತ್ನಿ ರೀನಾ ದತ್ತಾಳ ಮಕ್ಕಳು. ಬಾಡಿಗೆ ತಾಯ್ತನದ ಮೂಲಕ ಇತ್ತೀಚೆಗೆ ಮೂರನೇ ಮಗುವನ್ನು ಪಡೆದುಕೊಂಡಿದ್ದು ಸುದ್ದಿಯಾಗಿತ್ತು.

‘ನನಗೆ  ಮತ್ತು ಕಿರಣ್ ಇಬ್ಬರಿಗೂ ಮತ್ತೊಂದು ಮಗು ಬೇಕು ಎಂಬ ಆಸೆ ಇತ್ತು. ಇದರಲ್ಲಿ ಯಾವುದೇ ಗೊಂದಲವಿರಲಿಲ್ಲ. ಆತನ ಆಗಮನ ನಮಗೆ ಖುಷಿ ನೀಡಿದೆ. ನಾವು ಯಾವ ಮಾರ್ಗದಲ್ಲಿ ಮಗು ಪಡೆಯಬೇಕು ಎಂಬುದರ ಬಗ್ಗೆ ದೃಢವಾಗಿದ್ದೆವು. ಇಲ್ಲಿ ನಾವು ಯಾವ ತಪ್ಪೂ ಮಾಡಿಲ್ಲ, ಜನರಿಗೆ ಅದರ ಅರಿವಿರಲಿ. ಐವಿಎಫ್ ಸರ್ಜರಿ ಮೂಲಕ ಮಗುವಿಗೆ ಜನ್ಮ ನೀಡಿದ್ದರೆ ಸಂತಸವಿದೆ’ ಎಂದು ಕೆಲವರ ಕುಹಕಕ್ಕೆ ತಿರುಗೇಟು ನೀಡಿದ್ದಾನೆ ‘ಪಿಕೆ’. ‘ಆಜಾದ್ ಹುಟ್ಟುವ ಮೊದಲ ಈ 20 ವರ್ಷದಲ್ಲಿ ಏನು ಮಾಡಿದೆ ಎನ್ನುವುದು ಗೊತ್ತಿಲ್ಲ. ಆದರೆ ನನ್ನ ಬದುಕು ಈಗ ಪರಿಪೂರ್ಣ ಎನಿಸುತ್ತಿದೆ’ ಎಂದಿದ್ದಾನೆ ಅಮೀರ್.

■ ಅಮಿ


ಪ್ರಸಿದ್ಧಿರವರ ಗೌರಿ ಗಣೇಶ ಪ್ರಯುಕ್ತ
ಹೊಂಗನಸಿನ ನೆನಪು!!
ಸೊಗಸಾದ ಉಡುಪುಗಳನ್ನು ವಿಕ್ಷೀಸಿ

Introducing Vegetables & Indigo Colors
Angavastram in Silks & Cottons

Silks, Cotton & Salwars
Prasiddhi SILKS
A renowned name for well known sarees

Showrooms @

K.H. Road Ph: 22236613 | M.G. Road Ph: 25580433 | Marathahalli 9448288522/12
Bannerghatta Road Ph: 26689345 | Commercial Street Ph: 25321545 | Domlur Ph: 41511156



RAC/PS